## ಎಳೆಯರ ಆಮೋದ

# ನಾಪಾಸು

ಎಗ್ಸಾಮಿಗ್ಹೋದೆಯೊ ಆಲೀ ಎಂದರೆ
ಓಹೋ ಹೋದೆ ಅಂತಾನೆ ಆಲೀ
ಉತ್ತರ ಬರೆದೆಯೊ ಆಲೀ ಎಂದರೆ
ಓಹೋ ಬರೆದೆ ಅಂತಾನೆ ಆಲೀ
ರಿಸಲ್ಟ್ ಬಂತೋ ಆಲೀ ಎಂದರೆ
ಓಹೋ ಬಂತು ಅಂತಾನೆ ಆಲೀ
ನೀ ಪಾಸಾಗಿಬಿಟ್ಟೆಯೊ ಆಲೀ ಎಂದರೆ
ನಾವಾಪಾಸಾಗಿಬಿಟ್ಟೆ ಅಂತಾನೆ ಆಲೀ



# ಕತ್ತೆ ಕತ್ತೆ ಯಾಕತ್ತೆ?

ಕತ್ತೆ ಕತ್ತೆ ಯಾಕತ್ತೆ?
ಬೆನ್ನಿನ ಹೊರೆ ಹೆಚ್ಚಾಯ್ತು
ಆದಕತ್ತೆ

ಕತ್ತೆ ಕತ್ತೆ ಯಾಕತ್ತೆ?
ಬೆತ್ತದ ಏಟು ಜೋರಾಯ್ತು
ಆದಕತ್ತೆ

ಕತ್ತೆ ಕತ್ತೆ ಯಾಕತ್ತೆ
ಕತ್ತೆ ಅನ್ನಿಸಿ ಸಾಕಾಯ್ತು
ಆದಕತ್ತೆ

ಆದಕತ್ತೆ ಇದಕತ್ತೆ
ಎಲ್ಲದಕತ್ತೆ ಇಲ್ಲದಕತ್ತೆ
ನೀ ನಗೋದ್ ಯಾವಾಗ್ ಮತ್ತೆ?

